ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿಟಿಇ/128/ಇ.ಎಸ್.ಟಿ(7)/2021

ಆಯುಕ್ತರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 19.12.2023

## ಸುತ್ತೋಲೆ

**ವಿಷಯ:** ಇಲಾಖಾ ವ್ಯಾಪ್ತಿಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಇಂಜನೀಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಗಳಲ್ಲಿ ಚುನಾವಣಾ ಆಯೋಗ ಕೋರಿರುವ ಮಾಹಿತಿಯನ್ನು ಇಂಡೀಕರಿಸುವ ( Update ಮಾಡುವ ) ಕುರಿತು

**ಉಲ್ಲೇಖ:** ದಿನಾಂಕ: 18.12.2023ರ ಮುಖ್ಯ ಚುನಾವಣಾಧಿಖಾರಿಯವರ ಕಛೇರಿಯ ಸಭಾ ಸೂಚನೆ

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 18 ವರ್ಷ ವಯಸ್ಸಿನ ಪ್ರತಿ ಪ್ರಜೆಯು ಚುನಾವಣಾ ಆಯೋಗದಿಂದ EPIC Card ಪಡೆದು ಕಡ್ಡಾಯ ಮತದಾನಮಾಡುವಂತೆ ಪ್ರೇರೇಪಿಸಿ ನ್ಯಾಯಸಮ್ಮತ ಮತ್ತು ಮಾಹಿತಿಯುಕ್ತ ಮತದಾನವಾಗುವಂತೆ ಮಾಡುವುದು ಭಾರತ ಚುನಾವಣಾ ಆಯೋಗದ ಧ್ಯೇಯವಾಗಿದೆ. ಕಾರಣ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 18 ವರ್ಷ ಅಥವಾ 18 ವರ್ಷ ಮೇಲ್ಪಟ್ಟ ವಯಸ್ಸಿನ ಎಲ್ಲಾ ವಿದ್ಯಾರ್ಥಿಗಳಿಗೆ ಮತದಾನದ ಸಾಕ್ಷರತೆಯನ್ನು ಮೂಡಿಸುವ ಸಲುವಾಗಿ Electoral Literacy Club (ELC) ಸ್ಥಾಪಿಸಿ ಅದಕ್ಕೊಬ್ಬ ಶಿಕ್ಷಕ/ಉಪನ್ಯಾಸಕರನ್ನು ನೋಡಲ್ ಅಧಿಕಾರಿಯನ್ನಾಗಿ ಮತ್ತು ಒಬ್ಬ ವಿದ್ಯಾರ್ಥಿಯನ್ನು ಕ್ಯಾಮ್ಪಸ್ ಅಂಬ್ಯಾಸಿಡರ್ ಅನ್ನಾಗಿ ನೇಮಿಸಿ ಅವರ ಸಂಪರ್ಕ ವಿವರಗಳನ್ನು ನೀಡಲು ಇಂಜಿನಿಯರಿಂಗ್ ಕಾಲೇಜುಗಳ ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಪ್ರತ್ಯೇಕವಾಗಿ Google spread sheet ಗಳನ್ನು e-mail (ಮಿಂಚಂಚೆ) ಮೂಲಕ ಕಳುಹಿಸಲಾಗಿದೆ.

18 ಅಥವಾ 18 ವರ್ಷ ಮೇಲ್ಪಟ್ಟ ವಯಸ್ಸಿನ ವಿದ್ಯಾರ್ಥಿಗಳು ಕಡ್ಡಯಾವಾಗಿ EPIC Card ಹೊಂದಿರುವುದನ್ನು ಖಚಿತಪಡಿಸಿಕೊಳ್ಳುವುದು, EPIC Card ಗಳನ್ನು ಇನ್ನೂ ಪಡೆಯದ ವಿದ್ಯಾರ್ಥಿಗಳಿಗೆ https://eci.gov.in/it-applications/mobile-applications/voter-helpline-app-r27/ ರ ಮೂಲಕ Voter Help App ಅನ್ನು ತಮ್ಮ ಮೋಬೈಲ್ ಗಳಲ್ಲಿ download ಮಾಡಿ https://youtu.be/rAjzLn75fhg ರಲ್ಲಿ ತಿಳಿಸಿದ ಕ್ರಮವನ್ನು ಅನುಸರಿಸುವುದು.

ಚುನಾವಣಾ ಆಯೋಗ ಕೋರಿರುವ ಮಾಹಿತಿಯನ್ನು ತಮಗೆ e-mail (ಮಿಂಚಂಚೆ) ಮೂಲಕ ಕಳುಹಿಸಲಾದ Google spread sheet ಗಳನ್ನು ಭರ್ತಿಮಾಡಿ ಹೊಸದಾಗಿ ನೊಂದಾವಣೆಯ ಪ್ರಗತಿಯನ್ನು ಪ್ರತಿದಿನ ಇಂಡೀಕರಿಸಿದ (Update) ಮಾಹಿತಿಯನ್ನು ಇಲಾಖೆಗೆ ನೀಡುವಂತೆ ಸೂಕ್ತಕ್ರಮ ವಹಿಸಲು ಪ್ರಾಚಾರ್ಯರುಗಳಿಗೆ ಸೂಚಿಸಿದೆ.

ನಿರ್ದೇಶಕರು (ಪ್ರಭಾರ)

ಇವರಿಗೆ :

1. ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. ಇ - ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಛೇರಿ ಪ್ರತಿ.